# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

# Bangalore Development Authority

ಸಂಖ್ಯೆ : ಬೆಂ.ಅ.ಪ್ರಾ/ನಮ/ಅ.ಸ/ಅ.ಅ-1/ತಾ.ಸ-4/ಪೂ/22/2023-24
No.

ದಿನಾಂಕ ದಿನಾಂಕ.24.08.2023
Date :
ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಅನುಸೂಚಿ-ಎ 5
(ಉಪವಿಧಿ ಸಂಖ್ಯೆ:4.1)
**ನಕ್ಷೆ ಮಂಜೂರಾತಿ ಪತ್ರ**

ಶ್ರೀಮತಿ/ಶ್ರೀ

M/s Mista Infra Pvt. Ltd
No. 1109, 11th Floor, Tower-B,
Brigade Signature Towers,
Kattamannallur,
Old Madras Road,
Bangalore-562129.

ಮಾನ್ಯರೆ,

ಅರ್ಜಿದಾರರಾದ ತಾವು ದಿನಾಂಕ: 29.07.2022 ರಂದು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕೋನದಾಸನಪುರ ಗ್ರಾಮದ ಸರ್ವೆ ನಂ. 2/6 ರಲ್ಲಿನ ಒಟ್ಟಾರೆ 04ಎಕರೆ 02ಗುಂಟೆ (ಕಿಮ್ಮತ್ತು ಪಾವತಿಸಿಕೊಂಡು ಭೂ ಪರಿವರ್ತನೆಯಾಗಿರುವ 0-12ಗುಂಟೆ ಎ ಖರಾಬು ಪ್ರದೇಶ ಒಳಗೊಂಡಂತೆ), ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬ್ಲಾಕ್-1 ರಲ್ಲಿ 05ತಳ+ನೆಲ+51ಮೇಲಂತಸ್ತುಗಳು 250 ವಸತಿ ಘಟಕಗಳು, ಬ್ಲಾಕ್-2 ರಲ್ಲಿ 5ತಳ+ನೆಲ+42 ಮೇಲಂತಸ್ತುಗಳು ಮತ್ತು ಬ್ಲಾಕ್-3 ರಲ್ಲಿ 05ತಳ+ನೆಲ+49 ಮೇಲಂತಸ್ತುಗಳನ್ನೊಳಗೊಂಡ ಬಹುಮಹಡಿ ವಸತಿ ಕಟ್ಟಡ ನಕ್ಷೆ ಮಂಜೂರಾತಿ ನೀಡಲು ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ.368, ದಿನಾಂಕ: 20.04.2023 ರಂದು ಅನುಮೋದನೆ ನೀಡಿದ್ದು, ತದನಂತರ, ನಕ್ಷೆ ಮಂಜೂರಾತಿ ಶುಲ್ಕವಾದ ರೂ.3,01,05,500/- ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ಸೂಚನಾ ಪತ್ರ ನೀಡಿರುವ ಸಂಬಂಧ, ತಾವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ ಮೇರೆಗೆ WP No.12753/2020 (BDA) ದಿನಾಂಕ.23.06.2023 ರ Interim Order ರಲ್ಲಿ ಸೂಚನಾ ಪತ್ರದಲ್ಲಿ ನೀಡಿರುವ ಕೆಲವು ಶುಲ್ಕಗಳಿಗೆ ಮಧ್ಯಂತರ ತಡೆಯಾಜ್ಞೆ ನೀಡಿ ಉಳಿಕೆ ಶುಲ್ಕ ಪಾವತಿಸಿಕೊಳ್ಳಲು ಆದೇಶವಾಗಿರುತ್ತದೆ.

ಪುಟ ಸಂಖ್ಯೆ: 2 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಅದರಂತೆ, ಪ್ರಾಧಿಕಾರದ ಕಾನೂನು ವಿಭಾಗದಿಂದ ದಿನಾಂಕ: 04.08.2023 ರಂದು ನೀಡಿರುವ ಅಭಿಪ್ರಾಯದಂತೆ ಮತ್ತು ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ.2870, ದಿನಾಂಕ: 09.08.2023 ರಂದು ಅನುಮೋದನೆ ನೀಡಿದ್ದು, ಕಾನೂನು ವಿಭಾಗದ ಅಭಿಪ್ರಾಯದಂತೆ ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶಕ್ಕೆ ಬದ್ಧರಾಗಿರುವುದಾಗಿ ತಾವು ದಿನಾಂಕ.01.08.2023 ರಂದು ಮುಚ್ಚಳಿಕೆ ಪತ್ರ ಸಲ್ಲಿಸಿರುತ್ತೀರಿ, WP No.12753/2023, ದಿನಾಂಕ.23.06.2023 ರ Interim Order ನಂತೆ ರೂ.42,59,850/- ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ಪ್ರಾಧಿಕಾರದಿಂದ ಸೂಚನಾ ಪತ್ರ ನೀಡಲಾಗಿದ್ದು, ಅದರಂತೆ, ತಾವು ಚಲನ್ ಸಂಖ್ಯೆ: GN23083584, ದಿನಾಂಕ: 19.08.2023 ರಂದು ಒಟ್ಟು ರೂ. 42,59,850/- ಗಳನ್ನು ಪಾವತಿಸಿದ್ದು, ಅದರಂತೆ ದಿನಾಂಕ: 24.08.2023 ರಂದು ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆ. ಪ್ರಸ್ತುತ ಮಂಜೂರಾತಿಯು ದಿನಾಂಕ: 24.08.2023 ರಿಂದ ದಿನಾಂಕ: 23.08.2025 ವರೆಗಿನ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ. ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಮಂಜೂರಾತಿ ನೀಡಲಾಗಿದೆ ಎಂದು ಈ ಮೂಲಕ ತಿಳಿಯಪಡಿಸಿದ್ದೇನೆ.

**ಷರತ್ತುಗಳು**

1) ಪ್ರಾಧಿಕಾರದ ಮಂಜೂರಾದ ನಕ್ಷೆಯ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.
2) ಸಂಬಂಧಪಟ್ಟ ಪ್ರಾಧಿಕಾರದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರಿಗೆ ಅರ್ಜಿ ಸಲ್ಲಿಸಿ ಪ್ರಾರಂಭ ಮಾಡಲು ಸೂಕ್ತ ಅನುಮತಿ ಪತ್ರ ಪಡೆಯತಕ್ಕದ್ದು.
3) ಮಂಜೂರಾತಿಯಾದ ನಕ್ಷೆಯ ಪ್ರಕಾರ ಕಟ್ಟಡ ನಿರ್ಮಾಣ ಮಾಡತಕ್ಕದ್ದು.
4) ಪೂರ್ಣಗೊಂಡ ಕಟ್ಟಡ ಅಥವಾ ಮನೆಯನ್ನು ವಾಸಕ್ಕೆ ಉಪಯೋಗಿಸುವ ಮೊದಲು ಸಂಬಂಧಪಟ್ಟ ಅಧಿಕಾರಿಗಳಿಂದ (ಪ್ರಾಧಿಕಾರದ) ವಾಸಯೋಗ್ಯ ಅನುಮತಿ ಪತ್ರವನ್ನು ಪಡೆಯತಕ್ಕದ್ದು.
5) ನಿವೇಶನದ ಸುತ್ತಳತೆಯಲ್ಲಿ ಹಸಿರು ಸಸಿಗಳನ್ನು ನೆಡುವುದು.
6) ಇವುಗಳೊಂದಿಗೆ ಈ ಕೆಳಗೆ ನಮೂದಿಸಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

## -:ಷರತ್ತುಗಳು:-

1) ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರ ಪತ್ರ ಸಂಖ್ಯೆ.ಎಲ್.ಎನ್.ಡಿ(ಪೂ)ಸಿ.ಆರ್-40/2017-18, ದಿನಾಂಕ.21.01.2023 ರಲ್ಲಿನ ವರದಿಯಂತೆ ಕ್ರಮವಹಿಸಬೇಕಾಗಿರುತ್ತದೆ.
2) ಕಟ್ಟಡದ ಕಾಮಗಾರಿಯ ಆರ್.ಸಿ.ಸಿ ಕಂಬಗಳು ನೆಲಮಟ್ಟಕ್ಕೆ ಎತ್ತರಿಸಿದ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.
3) ಬಂಡಿದಾರಿ / ರಾಜ ಕಾಲುವೆ / ಮಳೆ ನೀರು ಚರಂಡಿ ಇನ್ನೂ ಯಾವುದೇ ತರಹದ ಖರಾಬು ಜಮೀನು ಸದರಿ ಜಮೀನಿನ ವಿಸ್ತೀರ್ಣದಲ್ಲಿ ಇದ್ದು, ಆ ಪ್ರದೇಶದಲ್ಲಿ ಯಾವುದೇ ತರಹದ ನಿರ್ಮಾಣದ ಕಾರ್ಯವನ್ನು ಮಾಡುವಂತಿಲ್ಲ ಹಾಗೂ ಇತರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದಲ್ಲ ಮತ್ತು ಅಂತಹ ಪ್ರದೇಶಕ್ಕೆ ಸೂಕ್ತ ರಕ್ಷಣೆ ಒದಗಿಸುವುದು.
4) ಅಭಿವೃದ್ಧಿದಾರರು ಭದ್ರತಾ ಸಿಬ್ಬಂಧಿಯವರನ್ನು ನೇಮಿಸಿ ಕಟ್ಟಡ ನಿರ್ಮಾಣದ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ವಾಹನ ಸಂಚಾರ ವ್ಯವಸ್ಥೆಯಲ್ಲಿ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು, ಹಾಗೂ ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಸ್ವತ್ತಿನ ಒಳಭಾಗದಲ್ಲಿ ಅಳವಡಿಸಿ ನಿರ್ವಹಿಸುವುದು.

ಪುಟ ಸಂಖ್ಯೆ: 3 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

5) ಅರ್ಜಿದಾರರು ಶಾಸನಬದ್ಧ ಸಂಸ್ಥೆಗಳಿಗೆ, ಬಿಡಿಎ / ಬಿಬಿಎಂಪಿ / ನಗರ ಸಭೆ / ಪಂಚಾಯತ್ ಗೆ ಯಾವುದಾದರೂ ಬಾಕಿ ಶುಲ್ಕಗಳನ್ನು ಪಾವತಿಸಬೇಕಿದ್ದಲ್ಲಿ ಅಂತಹ ಸಂಸ್ಥೆಗಳು ವಿಧಿಸುವ ಶುಲ್ಕವನ್ನು ಪಾವತಿಸತಕ್ಕದ್ದು.

6) ಮಳೆ ನೀರು ಕೊಯ್ಲನ್ನು ಬೆಂಗಳೂರು ಜಲ ಮಂಡಳಿ ರವರು ನಿಗಧಿಪಡಿಸಿರುವಂತೆ ಕಡ್ಡಾಯವಾಗಿ ಅಳವಡಿಸುವುದು.

7) ಇಬ್ಬಗೆಯ ಕೊಳವೆ ವಿಧಾನವನ್ನು ಕುಡಿಯುವ ನೀರಿಗಾಗಿ ಹಾಗೂ ಇತರೆ ಉದ್ದೇಶಿತ ವ್ಯವಸ್ಥೆಗಳಿಗಾಗಿ ಅಳವಡಿಸುವುದು.

8) ಒಳಚರಂಡಿ ವ್ಯವಸ್ಥೆಗಾಗಿ ಸ್ಥಾಪಿಸಿದ ನೈರ್ಮಲ್ಯ ಶುದ್ಧೀಕರಣ ಘಟಕವನ್ನು (S.T.P) ಅಳವಡಿಸಿ ಹಾಗೂ ಶುದ್ಧೀಕರಿಸಿದ ನೀರನ್ನು ಮನೆಗಳಲ್ಲಿನ ಶೌಚಾಲಯ, Gardening ಹಾಗೂ ಗಿಡಮರ Lawn ಗಳಿಗಾಗಿ ಕಡ್ಡಾಯವಾಗಿ ಉಪಯೋಗಿಸತಕ್ಕದ್ದು ಮತ್ತು ಇದರಿಂದ ಉತ್ಪತ್ತಿಯಾಗುವ Sewage ಪೂರ್ಣ ನೀರನ್ನು ಯಾವುದೇ ಕಾರಣಕ್ಕೂ ಕೆರೆ/ಹಳ್ಳ/ಕಣಿವೆ/ಹೊಳೆಗೆ ಬಿಡತಕ್ಕದಲ್ಲ.

9) ಅಭಿವೃದ್ಧಿದಾರರು ಕಟ್ಟಡದ ಆವರಣಗಳಲ್ಲಿ ಗಿಡ ಮರಗಳನ್ನು ಬೆಳೆಸಿ ಪರಿಸರವನ್ನು ಸಂರಕ್ಷಿಸುವ ಷರತ್ತಿಗೆ ಬದ್ಧರಾಗಿರತಕ್ಕದ್ದು.

10) ಅಭಿವೃದ್ಧಿದಾರರು ಕಟ್ಟಡಗಳಿಗೆ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

11) ಅಭಿವೃದ್ಧಿದಾರರು ಟ್ರಾನ್ಸ್ ಫಾರ್ಮರ್ ಗಾಗಿ ಗುರುತಿಸಿರುವ ಪ್ರದೇಶದಲ್ಲಿ ಅಳವಡಿಸತಕ್ಕದ್ದು, ಬೇರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

12) ಅಭಿವೃದ್ಧಿದಾರರು ಕಟ್ಟಡದ ಸುರಕ್ಷತೆ ಹಾಗೂ ಭದ್ರತೆಯ, ಕಟ್ಟಡದ ವಿನ್ಯಾಸದ ಬಗ್ಗೆ ಸಂಪೂರ್ಣವಾಗಿ ಜವಬ್ದಾರರಾಗಿರತಕ್ಕದ್ದು. ಕಟ್ಟಡದ ವಿನ್ಯಾಸದ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಹೊಂದಿರುವುದಿಲ್ಲ. ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣಕ್ಕೆ ಕಾರ್ಮಿಕರು ಹಾಗೂ ನಿರ್ಮಾಣದ ಬಗ್ಗೆ ಎಲ್ಲಾ ಸೂಕ್ತ ಕ್ರಮಗಳನ್ನು ಅಳವಡಿಸಿಕೊಳ್ಳತಕ್ಕದ್ದು, ನಿರ್ಮಾಣ ಸಮಯದಲ್ಲಿ ಯಾವುದೇ ತರಹದ ಅನಾಹುತ ಅಥವಾ ಪ್ರಾಣ ಹಾನಿಯಾಗದಂತೆ ಕಟ್ಟುನಿಟ್ಟಿನ ಎಚ್ಚರವಹಿಸತಕ್ಕದ್ದು, ಯಾವುದೇ ತರಹದ ಅನಾಹುತಕ್ಕೆ ಗುತ್ತಿಗೆ ಪಡೆದ ನಿರ್ಮಾಣದಾರರು ನೇರ ಜವಬ್ದಾರರಾಗಿರುತ್ತಾರೆ. ಅಂತಹ ಪ್ರಸಂಗ ಕಂಡುಬಂದಲ್ಲಿ ಕಾನೂನು ಕ್ರಮ ಜರುಗಿಸುವುದಲ್ಲದೆ ನೀಡಲಾಗಿರುವ ಮಂಜೂರಾತಿಯು ತಂತಾನೆ ರದ್ದಾಗುತ್ತದೆ.

13) ಅಭಿವೃದ್ಧಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಅಥವಾ ಇನ್ನಾವುದೇ ಕಟ್ಟಡದ ಅನುಪಯುಕ್ತ ಸಾಮಗ್ರಿಗಳಿಂದ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು. ಇದಕ್ಕೆ ಅನುಗುಣವಾಗಿ ಬ್ಯಾರಿಕೇಡಿಂಗ್ ನ್ನು ಅಳವಡಿಸಿ ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು.

14) ಯೋಜನೆಯಲ್ಲಿ ಘನ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಹಾಗೂ ಇತ್ಯಾದಿಯಾಗಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು ಹಾಗೂ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

15) ಕಟ್ಟಡದ ಕಾಮಗಾರಿ ಆರಂಭಿಸುವ ಮುನ್ನ ಅರ್ಜಿದಾರರು ಲೈಸನ್ಸ್ ಅನ್ನು ಸ್ಥಳೀಯ ಸಂಸ್ಥೆಯಿಂದ ಪಡೆಯತಕ್ಕದ್ದು.

16) ಕಟ್ಟಡ ನಿರ್ಮಾಣ ಸಮಯದಲ್ಲಿ ಸೆಂಟರಿಂಗ್ ಅಥವಾ ಇನ್ನಿತರೇ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದ್ದಲ್ಲಿ ಅದಕ್ಕೆ ಅಭಿವೃದ್ಧಿದಾರರೇ ಜವಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರು ಮಾಡಿದ ಯಾವುದೇ ಇಲಾಖೆ / ಸಂಸ್ಥೆಯು ಜವಬ್ದಾರರಾಗಿರುವುದಿಲ್ಲ.

17) ಅಭಿವೃದ್ಧಿದಾರರ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲಿಕತ್ವದ ಬಗ್ಗೆ ಯಾವುದೇ ತಪ್ಪು ಮಾಹಿತಿ / ದಾಖಲಾತಿ ನೀಡಿದ್ದಲ್ಲಿ, ಅರ್ಜಿದಾರರಿಗೆ ಯಾವುದೇ ಮುನ್ಸೂಚನೆ ನೀಡದೆ ನಕ್ಷೆ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ ಹಾಗೂ ಕಾನೂನು ರೀತ್ಯಾ ಸೂಕ್ತ ಕ್ರಮಕೈಗೊಳ್ಳಲಾಗುವುದು.

18) ಅಭಿವೃದ್ಧಿದಾರರು ಕುಡಿಯುವ ನೀರಿನ ಸರಬರಾಜಿಗಾಗಿ ಸಂಬಂಧಪಟ್ಟ ಬಿ.ಡಬ್ಲ್ಯು.ಎಸ್.ಎಸ್.ಬಿ ಯನ್ನು ಅಥವಾ ಸ್ಥಳೀಯ ಸಂಸ್ಥೆಯನ್ನು ಅವಲಂಬಿಸದೆ ನೀರಿನ ಸರಬರಾಜಿಗಾಗಿ ತಮ್ಮ ಸ್ವಂತ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

19) ಅಭಿವೃದ್ಧಿದಾರರು ಕಟ್ಟಡದ ಕಾಮಗಾರಿ ಪ್ರಾರಂಭಿಸುವ ಮುನ್ನ ಸದರಿ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರುಗಳಿಗೆ ಶೌಚಾಲಯಗಳನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು ಹಾಗೂ ಸದರಿ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಇಲ್ಲವಾದಲ್ಲಿ ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗುವುದಿಲ್ಲ ಹಾಗೂ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯಿಲ್ಲದೆ ರದ್ದುಪಡಿಸಲಾಗುವುದು.

ಪುಟ ಸಂಖ್ಯೆ: 4 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

20) ಕಟ್ಟಡ ನಿರ್ಮಾಣ ಸಮಯದಲ್ಲಿ ಸುತ್ತಮುತ್ತಲಿನ ಪ್ರದೇಶಕ್ಕೆ ಅನಗತ್ಯ ಶಬ್ದ ಮಾಲಿನ್ಯ ತಡೆಗಟ್ಟುವ ಸಂಬಂಧ, ನಿರ್ಮಾಣದ ಹೊರಭಾಗಗಳಿಗೆ ಅಗತ್ಯ ರಕ್ಷಣಾ ಕವಚವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರ ಸಲಹೆಯಂತೆ ಕಡ್ಡಾಯವಾಗಿ ಅಳವಡಿಸತಕ್ಕದ್ದು.

21) ಅಭಿವೃದ್ಧಿದಾರರು ವಾಹನ ನಿಲುಗಡೆಯ ಸ್ಥಳದಲ್ಲಿ ಕಡ್ಡಾಯವಾಗಿ ವಿದ್ಯುತ್ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್ ಗಳನ್ನು ಅಳವಡಿಸತಕ್ಕದ್ದು.

22) ಅಭಿವೃದ್ಧಿದಾರರು ಸಿಟಿ ಮಾಸ್ಟರ್ ಪ್ಲಾನ್ ಗಳಲ್ಲಿ ಗುರುತಿಸಿರುವಂತೆ ವಿದ್ಯುತ್ ವಾಹನಗಳ ಚಾರ್ಜಿಂಗ್ ಗಳಿಗೆ ಸೂಕ್ತವಾದ ಮೀಸಲು ಸ್ಥಳಗಳನ್ನು ಕಾಯ್ದಿರಿಸತಕ್ಕದ್ದು.

23) ಗೌರವಾನ್ವಿತ ರಾಷ್ಟ್ರೀಯ ಹಸಿರು ನ್ಯಾಯಪೀಠ ರವರ ಪತ್ರ ಸಂಖ್ಯೆ: PCB/031/C&D/2016/5392/2020-21 ದಿ: 25.02.2021 ರಂತೆ Construction and Demolition (C & D) ಕಸವನ್ನು ವಿಲೆ ಮಾಡುವ ಬಗ್ಗೆ ನಿರ್ವಹಣೆ ಯೋಜನೆಯನ್ನು ULB (Urban Local Body) ರವರಿಗೆ ಸಲ್ಲಿಸಿ ಅನುಮೋದನೆ ಪಡೆದು ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವ ಮುನ್ನ ಸಲ್ಲಿಸುವುದು.

24) ವಿವಿಧ ಇಲಾಖೆಗಳಿಂದ ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿನ (NOC) ಷರತ್ತುಗಳನ್ನು ಪಾಲಿಸುವುದು ಹಾಗೂ ಸದರಿ ಷರತ್ತುಗಳಿಗೆ ಬದ್ಧರಿರತಕ್ಕದ್ದು.

25) ಅರ್ಜಿದಾರರು Occupancy Certificate ಅನ್ನು ಪಡೆಯಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವ ಸಮಯದಲ್ಲಿ ನೀರು ಸರಬರಾಜು ಕಾಮಗಾರಿಗಳು Sewage Treatment Plant ಹಾಗೂ Rain Water Harvesting ಅನ್ನು ನಿಯಮಕ್ಕನುಗುಣವಾಗಿ ನಿರ್ವಹಿಸಿರುವ ಬಗ್ಗೆ BWSSB ಯಿಂದ ದೃಢೀಕರಣ ಪತ್ರವನ್ನು ಸಲ್ಲಿಸುವುದು. ಹಾಗೆಯೇ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದಲೂ ಸಹ ಯೋಜನೆಯ ಸಮರ್ಪಕ ಅನುಷ್ಠಾನದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸುವುದು.

26) ಅಭಿವೃದ್ಧಿದಾರರು ಬೆಟರ್ ಮೆಂಟ್ ತೆರಿಗೆ ಪಾವತಿಸುವ ಕುರಿತು ಮಾನ್ಯ ಉಚ್ಛ ನ್ಯಾಯಾಲಯದ ನೀಡುವ 45727-45730/2011 (ಬೆಂಅಪ್ರಾ), ದಿನಾಂಕ: 03.09.2012ರ ತೀರ್ಮಾನದ ವಿರುದ್ಧ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದು, ಮೇಲ್ಮನವಿಯ ಕುರಿತು ನ್ಯಾಯಾಲಯ ನೀಡುವ ತೀರ್ಪಿಗೆ ಬದ್ಧರಾಗಿರಲು ಷರತ್ತಿಗೆ ಒಳಪಡಿಸಲಾಗಿದೆ.

27) ಪ್ರಶ್ನಿತ ಪ್ರದೇಶದಲ್ಲಿ 240.0ಚ.ಮೀ FAR ಪ್ರದೇಶಕ್ಕೆ ಒಂದು ಮರದಂತೆ ವಿವಿಧ ಜಾತಿ ಗಿಡ, ಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು.

28) ಪ್ರಶ್ನಿತ ಪ್ರದೇಶದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಆದೇಶಾನುಸಾರ ಮತ್ತು ನಿಯಮಾವಳಿಯಂತೆ ಕೆರೆ ಮತ್ತು ನಾಲಾಗೆ ಕಾಯ್ದಿರಿಸಿರುವ ಬಫರ್ ಪ್ರದೇಶವನ್ನು ಯಥಾರೀತಿ ಕಾಯ್ದಿರಿಸುವುದು ಹಾಗೂ ಕೆರೆ ಮತ್ತು ನಾಲಾ ಒತ್ತುವರಿಯಾಗದಂತೆ ಹಾಗೂ ಅಭಿವೃದ್ಧಿಪಡಿಸದಂತೆ ಕ್ರಮವಹಿಸುವುದು. ಒಂದು ವೇಳೆ ಒತ್ತುವರಿಯಾದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ನೀಡಿರುವ ನಕ್ಷೆ ಮಂಜೂರಾತಿ ಪತ್ರವನ್ನು ರದ್ದುಗೊಳಿಸಲಾಗುವುದು.

29) ಮಾನ್ಯ ಉಚ್ಚ ನ್ಯಾಯಾಲಯದ WP No.12753/2023(BDA) ರ ಸಂಬಂಧ ಸಲ್ಲಿಸಿರುವ ಪ್ರಮಾಣ ಪತ್ರದಂತೆ ಮಾನ್ಯ ನ್ಯಾಯಾಲಯದ ಅಂತಿಮ ಆದೇಶಕ್ಕೆ ಬದ್ಧರಾಗಿರತ್ತಕ್ಕದ್ದು .

30) ಗ್ರಾಮನಕಾಶೆಯಲ್ಲಿರುವ ಕೆರೆ ಚಿಹ್ನೆಯನ್ನು ಕರ್ನಾಟಕ ಭೂದಾಖಲೆಗಳ ನಿಯಮಾವಳಿ 1966 ರ ನಿಯಮ 73 ಅಡಿಯಲ್ಲಿ ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶವನ್ನು ಪ್ರಾರಂಭಿಕ ಪ್ರಮಾಣ ಪತ್ರವನ್ನು ಸಲ್ಲಿಸುವ ಮುನ್ನ ಸಲ್ಲಿಸುವುದು.

31) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಭದ್ಧರಾಗಿರತಕ್ಕದ್ದು.

32) ಪ್ರಶ್ನಿತ ಜಮೀನಿನ ಮುಂಭಾಗದಲ್ಲಿರುವ 353.62 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ಪರಿತ್ಯಾಜನಾ ಪತ್ರದ ಮೂಲಕ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಪ್ರಸ್ತಾವನೆ ಸಲ್ಲಿಸುವ ಮುನ್ನ ಹಸ್ತಾಂತರಿಸುವುದು.

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಯಥಾಪ್ರತಿಯನ್ನು ಕಾರ್ಯಪಾಲಕ ಅಭಿಯಂತರರು, ಪೂರ್ವ ವಿಭಾಗ, ಬಿ.ಡಿ.ಎ. ವಾಣಿಜ್ಯ ಸಂಕೀರ್ಣ, ಹೆಚ್.ಎಸ್.ಆರ್. ಬಡಾವಣೆ, ಬೆಂಗಳೂರು ರವರ ಮಾಹಿತಿಗಾಗಿ ರವಾನಿಸಿದೆ.